1	2	3	4	5	6
18	ಉಡುಪಿ	285	05	59	24
19	ಬೆಳಗಾಂ	33	17	253	182
20	ಬೆಳಗಾಂ ಉತ್ತರ	-	05	-	165
21	ಬಿಜಾಪುರ	115	10	131	132
22	ಬಾಗಲಕೋಟೆ	41	27	79	156
23	ಧಾರವಾಡ	58	26	96	130
24	ಗದಗ್	13	11	73	89
25	ಹಾವೇರಿ	19	12	92	126
26	ಉತ್ತರ ಕನ್ನಡ	23	12	119	63
27	ಗುಲ್ಬರ್ಗ	172	14	54	10
28	ಗುಲ್ಬರ್ಗ ಉತ್ತರ	-	19	-	11
29	ಬಳ್ಳಾರಿ	58	25	60	20
30	ರಾಯಚೂರು	18	-	20	30
31	ಕೊಪ್ಪಳ	07	-	22	25
32	ಬೀದರ್	173	24	68	27
	ಒಟ್ಟು	2422	459	2524	1873

ಪ್ರಾಥಮಿಕ ಪ್ರೌಢಶಾಲೆ ಮುಖ್ಯೋಪಾಧ್ಯಾಯ ಹುದ್ದೆಗಳ ನೇಮಕ

1229(1610) ಶ್ರೀ ಲಕ್ಷ್ಮೀನಾರಾಯಣ ಎಂ.ಡಿ. (ಅಣ್ಣಯ್ಯ) (ತುರುವೇಕೆರೆ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರಾಥಮಿಕ ಮತ್ತು ಪ್ರೌಢಶಾಲೆ ಮುಖ್ಯೋಪಾಧ್ಯಾಯರ ಹುದ್ದೆಗೆ ಬಡ್ತಿ ಆಧಾರದ ಮೇಲೆ ನೇಮಕ ಮಾಡಲು ಸರ್ಕಾರದ ಮುಂದೆ ಪ್ರಸ್ತಾವನೆ ಇದೆಯೆ;

ಆ) ಎಷ್ಟು ಜನರನ್ನು ನೇಮಕ ಮಾಡಿಕೊಳ್ಳಲು ನಿರ್ಧರಿಸಲಾಗಿದೆ;

ಇ) ಮುಖ್ಯೋಪಾಧ್ಯಾಯರ ಹುದ್ದೆಗೆ ಈವರೆಗೂ ಯಾವ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲಾಗುತ್ತಿತ್ತು ಈ ನೀತಿಯನ್ನು ಈಗ ಕೈಬಿಡಲು ಕಾರಣಗಳೇನು;

ಈ) ಬಡ್ತಿ ಆಧಾರದ ಮೇಲೆ ಮುಖ್ಯೋಪಾಧ್ಯಾಯರನ್ನು ನೇಮಕ ಮಾಡುವ ಪ್ರಕ್ರಿಯೆಯು ಯಾವ ಹಂತದಲ್ಲಿದೆ?

ಪೊ॥ ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ರಾಜ್ಯ ಸಚಿವರು): ಅ) 1) ಹುದ್ದೆಗಳು ಖಾಲಿಯಾದಂತೆ ಪ್ರಾಥಮಿಕ ಶಾಲಾ ಮುಖ್ಯೋಪಾಧ್ಯಾಯರ ಹುದ್ದೆಗಳಿಗೆ ಬಡ್ತಿಯನ್ನು ಜೇಷ್ಠತಾನುಸಾರ ಜಿಲ್ಲಾ ಮಟ್ಟದಲ್ಲಿ ನೀಡಲಾಗುತ್ತಿದೆ.

2) ಪ್ರೌಢಶಾಲಾ ಮುಖ್ಯಶಿಕ್ಷಕರ ವೃಂದದ ಬಡ್ತಿ ಹುದ್ದೆಗಳು ಖಾಲಿಯಾದ ತಕ್ಷಣ ಸ್ಥಾನಪನ್ನ ಪದೋನ್ನತಿ ಮೂಲಕ ತುಂಬಲಾಗುತ್ತದೆ.

ಅ) 1) ಪ್ರಾಥಮಿಕ ಶಾಲಾ ಮುಖ್ಯ ಶಿಕ್ಷಕರ ಹುದ್ದೆಗಳನ್ನು ಜಿಲ್ಲಾಮಟ್ಟದಲ್ಲಿ ಜೇಷ್ಠತಾನುಸಾರ ಹುದ್ದೆಗಳು ಖಾಲಿಯಾದಂತೆ ಆಯಾ ವರ್ಷದಲ್ಲಿ ಭರ್ತಿ ಮಾಡಲಾಗುತ್ತಿದೆ.

2) ಇತ್ತೀಚಿಗೆ ಸ್ಥಾನಪನ್ನ ಬಡ್ತಿ ನೀಡಲು ಒದಗಿರುವ 210 ಹುದ್ದೆಗಳಿಗೆ ಪದೋನ್ನತಿ ನೀಡುವ ವಿಷಯ ಪರಿಶೀಲನೆಯಲ್ಲಿದೆ.

ಆ) 1) ಶೇ.100 ರಷ್ಟು ಪ್ರಾಥಮಿಕ ಶಾಲಾ ಮುಖ್ಯೋಪಾಧ್ಯಾಯರ ಹುದ್ದೆಗಳನ್ನು ಬಡ್ತಿ ಮೂಲಕ ತುಂಬಲಾಗುತ್ತದೆ.

2) ಶೇ.50 ನೇರನೇಮಕಾತಿ ಮತ್ತು ಶೇ.50 ಬಡ್ತಿ ಮುಖಾಂತರ ಪ್ರೌಢಶಾಲಾ ಮುಖ್ಯೋಪಾಧ್ಯಾಯರ ಹುದ್ದೆಗಳನ್ನು ತುಂಬಲು ಅವಕಾಶವಿದೆ. ಈಗಲೂ ಇದೇ ನೀತಿಯನ್ನು ಅಳವಡಿಸಲಾಗುತ್ತಿದೆ.

ಈ) ಮೇಲೆ 'ಆ' ಗೆ ನೀಡಿರುವ ಉತ್ತರ ಇದಕ್ಕೂ ಅನ್ವಯಿಸುತ್ತದೆ.

ಗಣಕ ಪರಿಷತ್ತಿನ ಕನ್ನಡ ನುಡಿಗೆ ಸಾಫ್ಟ್‌ವೇರ್ ಕಂಪನಿಗಳ ಅಡ್ಡಗಾಲು

1230 (1612) ಶ್ರೀ ಲಕ್ಷ್ಮೀನಾರಾಯಣ ಎಂ.ಡಿ. (ಅಣ್ಣಯ್ಯ) (ತುರುವೇಕೆರೆ) : ಮಾನ್ಯ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗಣಕ ಪರಿಷತ್ತಿಗೆ ಸರ್ಕಾರ ನೀಡಿರುವ ಅನುದಾನ ಮೊತ್ತವೆಷ್ಟು;

ಆ) ಕನ್ನಡ ನುಡಿ ಸಾಫ್ಟ್‌ವೇರ್‌ಗಳನ್ನು ಸರ್ಕಾರ ಉಚಿತವಾಗಿ ಸರಬರಾಜು ಮಾಡಲಿದೆಯೇ;

ಇ) ಯಾವ ಮಾನದಂಡದ ಆಧಾರದ ಮೇಲೆ ಉಚಿತವಾಗಿ ನೀಡುತ್ತದೆ; ಈ ಯೋಜನೆಯ ಒಟ್ಟು ಹಣವೆಷ್ಟು;

ಈ) ಈ ಕ್ರಮದಿಂದಾಗಿ ಖಾಸಗಿ ಸಾಫ್ಟ್‌ವೇರ್ ಕಂಪನಿಗಳಿಗೆ ನಷ್ಟವುಂಟಾಗುತ್ತಿದೆಯೇ; ಹಾಗಿದ್ದಲ್ಲಿ ಇದನ್ನು ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು;

ಶ್ರೀಮತಿ ರಾಣಿಸತೀಶ್ (ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು) :

ಅ) ಗಣಕ ಪರಿಷತ್ತಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮೂಲಕ ಯಾವುದೇ ಅನುದಾನವನ್ನು ನೀಡಿರುವುದಿಲ್ಲ. ಆದರೆ ಇಲಾಖೆಯ ವೆಬ್‌ಸೈಟ್ ಸಿದ್ಧಪಡಿಸಲು ರೂ. 3.00ಲಕ್ಷ ಹಾಗೂ ಇಲಾಖೆಗೆ ಅಗತ್ಯವಿರುವ ತಂತ್ರಾಂಶ ಅಭಿವೃದ್ಧಿಗೆ ರೂ. 1.00 ಲಕ್ಷಗಳನ್ನು ಪಾವತಿಸಲಾಗಿದೆ.

ಆ) "ನುಡಿ" ಕನ್ನಡ ಸಾಫ್ಟ್‌ವೇರನ್ನು ಎಲ್ಲರಿಗೂ ಉಚಿತವಾಗಿ ದೊರಕುವಂತ ಮಾಹಿತಿ ತಂತ್ರಜ್ಞಾನ ಇಲಾಖೆ ವ್ಯವಸ್ಥೆ ಮಾಡಿದೆ. ಈ ಸಾಫ್ಟ್‌ವೇರ್‌ನ್ನು ಆ ಇಲಾಖೆಯ ವೆಬ್‌ಸೈಟ್ ಆದ WWW.Bangaloreit.Com ನಲ್ಲಿ ಹಾಕಲಾಗಿದ್ದು, ಅಲ್ಲಿಂದ ಪ್ರಪಂಚದ ಯಾವುದೇ ಭಾಗದಲ್ಲಿರುವವರು ಅವಶ್ಯಕವಾದಾಗ ಸಾಫ್ಟ್‌ವೇರ್ ಪಡೆದುಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.

ಇ) ಕಂಪ್ಯೂಟರ್‌ಗಳಲ್ಲಿ ಕನ್ನಡ ಬಳಕೆಯನ್ನು ಜನ ಪ್ರಿಯಗೊಳಿಸುವ ಸದುದ್ದೇಶದಿಂದ ಸರ್ಕಾರವು ನಿಗದಿಪಡಿಸಿರುವ ಶಿಷ್ಟತೆಗಳನುಸಾರ ಅಭಿವೃದ್ಧಿಪಡಿಸಲಾಗಿರುವ ಈ ಸಾಫ್ಟ್‌ವೇರನ್ನು ಉಚಿತವಾಗಿ ನೀಡಲಾಗುತ್ತಿದೆ. ಕಂಪ್ಯೂಟರ್‌ಗಳಲ್ಲಿ ಕನ್ನಡದ ಬಳಕೆಯನ್ನು ಅದರಲ್ಲೂ ಮುಖ್ಯವಾಗಿ ಸರ್ಕಾರ ಇಲಾಖೆಗಳ ವಿದ್ಯುನ್ಮಾನ ಆಡಳಿತದಲ್ಲಿ ಕನ್ನಡದ ವ್ಯಾಪಿಕ ಬಳಕೆಗೆ ಅನುಕೂಲವಾಗುವಂತೆ ಅಗತ್ಯವಾದ ತಂತ್ರಾಂಶಗಳನ್ನು ಅಭಿವೃದ್ಧಿಪಡಿಸಲು ಹಾಗೂ ನುಡಿ ತಂತ್ರಾಂಶಗಳನ್ನು ಇನ್ನಷ್ಟು